40th Year of Publication. Phone: 3728.

ವಾರ್ಷಿಕ ಚಂದಾ ರೂ. 12—50.

ಪ್ರಭಾತ

ಬೆಲೆ 20 ಪೈಸೆ.

ಸಂಪುಟ: ೪೦. ಸಂಚಿಕೆ: ೩೧. | ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 8—9—1974 | VOL. 40. No. 31.

ರಾಜ್ಯ ಸಾರಿಗೆ ಸಚಿವರ ಜಿಲ್ಲಾ ಸಂಚಾರ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹಾಗು ರಾಜ್ಯ ಸಾರಿಗೆ ಸಚಿವ ಶ್ರೀ| ಕೆ. ಎಚ್. ರಂಗನಾಥ್ ಅವರು ಆಗೋಸ್ತು ತಾ. 31ಕ್ಕೆ ಜಿಲ್ಲೆಗಾಗಮಿಸಿ, ಐದು ದಿನಗಳ ಜಿಲ್ಲಾ ಸಂಚಾರ ಕಾರ್ಯಕ್ರಮ ಪೂರೈಸಿ ತಾ. ೪ರಂದು ಸಂಜೆ ಬೆಳ್ತಂಗಡಿಯಿಂದ ಮೂಡುಗೆರೆಗೆ ತೆರಳಿದರು. ಈ ಬಾರಿಯ ಜಿಲ್ಲಾ ಸಂದರ್ಶನ ಕಾಲದಲ್ಲಿ ಮಾನ್ಯ ಸಚಿವರು ವಿವಿಧ ನೆರೆ ಪೀಡಿತ ಪ್ರದೇಶಗಳಿಗೆ ಸಂದರ್ಶನವಿತ್ತು ಅಲ್ಲಿಯ ಸ್ಥಿತಿಗಳ ಪ್ರತ್ಯಕ್ಷಾವಲೋಕನ ಮಾಡಿದ್ದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಮೇಲಿನ ಅವಿಶ್ವಾಸದ ಬಗ್ಗೆ ಸ್ಥಳೀಯ ಕಾಂಗ್ರೆಸ್ ಪ್ರಮುಖರನ್ನು ಪ್ರತ್ಯಪ್ರತ್ಯೇಕ ಭೇಟಿಯಾಗಿ ಅಭಿಪ್ರಾಯ ಸಂಗ್ರಹಿಸಿದ್ದರು, ಕಾಂಗ್ರೆಸ್ ಸಂಘಟನೆಯ ಬಗ್ಗೆಯೂ ಬೇರೆ ಬೇರೆ ಕಡೆಗಳಲ್ಲಿ ಕಾಂಗ್ರೆಸ್ ಮುಖಂಡರೊಡನೆ ಅವರು ಮಾತುಕತೆ ನಡೆಸಿರುವರು. ಸಪ್ಟೆಂಬರ್ ತಾ. 8ರಂದು ಬಂಟ್ವಾಳದಲ್ಲಿ ಸೇರಿಸಲು ಉದ್ದೇಶಿಸಲಾದ ಜಿಲ್ಲಾ ಕಾಂಗ್ರೆಸ್ ಸಭೆಯನ್ನು ಮುಂದೂಡುವಂತೆ ಆದೇಶಿಸಿದ ಶ್ರೀ| ಕೆ. ಎಚ್. ರಂಗನಾಥರು, ದಕ್ಷಿಣ ಕನ್ನಡ ಕಾಂಗ್ರೆಸ್ ವಿದ್ಯಮಾನಗಳ ಕುರಿತು ಹೆಚ್ಚಿನ ಮಾತುಕತೆಗಾಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ. ಎನ್. ಮಹಾಬಲ ಶೆಟ್ಟರನ್ನು ಬೆಂಗಳೂರಿಗೆ ಕರೆದಿದ್ದಾರೆಂದು ತಿಳಿದುಬರುತ್ತದೆ.

ಜೊರ್ಜ್ ಫೆರ್ನಾಂಡಿಸ್ ಮಂಗಳೂರಲ್ಲಿ

"ವೇತನಸ್ತಂಭನ, ಬೆಲೆ ಏರಿಕೆ, ಭ್ರಷ್ಟಾಚಾರಗಳ ವಿರುದ್ಧ, ರೈಲ್ವೇ ನೌಕರರ ವಿರುದ್ಧದ ಸರಕಾರೀ ಧೋರಣೆ ವಿರುದ್ಧ ಮುಂದಿನ ಎರಡು ತಿಂಗಳುಗಳಲ್ಲಿ ರಾಷ್ಟ್ರವ್ಯಾಪ್ತವಾದ್ಯಂತ ಬೃಹತ್ ಮುಷ್ಕರಗಳ ಸರಣಿಯನ್ನೇ ಹೂಡಲಾಗುವುದೆಂದೂ ಈ ಹೋರಾಟದಲ್ಲಿ ಎಲ್ಲಾ ರಂಗಗಳ ನೌಕರರೂ ಪಾಲ್ಗೊಳ್ಳಬೇಕೆಂದೂ" ರೈಲ್ವೇ ನೌಕರರ ರಾಷ್ಟ್ರೀಯ ಒಕ್ಕೂಟಗಳ ಸಮನ್ವಯ ಸಮಿತಿಯ ಅಧ್ಯಕ್ಷ ಶ್ರೀ| ಜೊರ್ಜ್ ಫೆರ್ನಾಂಡಿಸ್ ಅವರು ರೈಲ್ವೇ ನೌಕರರ ಸಂಘಗಳ ಸಮನ್ವಯ ಸಮಿತಿ ಆಶ್ರಯದಲ್ಲಿ ತಾ. 4 ರಂದು ಮಂಗಳೂರು ರೈಲ್ವೇ ನಿಲ್ದಾಣದ ಬಳಿ ಜರಗಿದ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಹೇಳಿದರು.

ಶ್ರೀನಿವಾಸ ಮಲ್ಯ ಸ್ಮಾರಕ ಅಂಚೆಚೀಟಿಗೆ ಒತ್ತಾಯ

ಪಶ್ಚಿಮ ಕರಾವಳಿಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಹಾಗು ನವಮಂಗಳೂರು ಬಂದರದ ಕಾರಣಪುರುಷ ದಿವಂಗತ ಶ್ರೀ| ಯು. ಶ್ರೀನಿವಾಸ ಮಲ್ಯ ಅವರ ಸ್ಮರಣಾರ್ಥ ಅಂಚೆಚೀಟಿಯನ್ನು ನವಮಂಗಳೂರು ಬಂದರದ ಅಧಿಕೃತ ಉದ್ಘಾಟನೆ ವೇಳೆಗೆ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸುವ ನಿರ್ಣಯವೊಂದನ್ನು ಅಶೋಕನಗರ ಗೌಡಸಾರಸ್ವತ ಬ್ರಾಹ್ಮಣ ಸಮಾಜಸೇವಾ ಸಂಘವು ಇತ್ತೀಚೆಗೆ ಸ್ವೀಕರಿಸಿದೆ. ಶ್ರೀ| ಅಮ್ಮೆಂಬಳ ಸುಬ್ರಾಯ ಪೈ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕೆ. ಎಸ್. ಶರ್ಮರಿಗೆ ರಾಷ್ಟ್ರಪ್ರಶಸ್ತಿ

ಕಾಸರಗೋಡು ಬಿ. ಇ. ಎಂ. ಹೈಸ್ಕೂಲಿನಲ್ಲಿ ಕಳೆದ ಮೂರು ದಶಕಗಳಿಗೂ ಮಿಕ್ಕಿ ಕನ್ನಡ ಪಂಡಿತರಾಗಿರುವ ಶ್ರೀ| ಕೆ. ಎಸ್. ಶರ್ಮ ಅವರು ಉತ್ತಮ ಶಿಕ್ಷಕರೆಂದು ಈ ಬಾರಿಯ ರಾಷ್ಟ್ರಪ್ರಶಸ್ತಿ ಗಳಿಸಿರುವರು. ಉತ್ತಮ ವಾಗ್ಮಿ—ಸಾಹಿತಿ, ಗ್ರಂಥಕರ್ತ, ವಿಮರ್ಶಕ, ನಾಟಕ ನಿರ್ದೇಶಕರಾಗಿರುವ ಶ್ರೀ| ಶರ್ಮರು ಕಾಸರಗೋಡಿನ ಕನ್ನಡ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವಹಿಸಿದವರಾಗಿರುತ್ತಾರೆ.

ಗೊಬ್ಬರ ಉತ್ಪಾದನೆ ಜೂನ್ ವೇಳೆಗೆ

ಮಂಗಳೂರು ಫರ್ಟಿಲೈಸರ್ ಫ್ಯಾಕ್ಟರಿಯು 1975ನೇ ಜೂನ್ ತಿಂಗಳೊಳಗೆ ಮಾರಾಟಕ್ಕೆ ಗೊಬ್ಬರ ಉತ್ಪಾದನೆ ಆರಂಭಿಸುವುದೆಂದು ಮಂಗಳೂರು ಕೆಮಿಕಲ್ಸ್ ಎಂಡ್ ಫರ್ಟಿಲೈಸರ್ ಕೊರ್ಪೊರೇಶನಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ| ಎಸ್. ಆರ್. ಶೇಷಾದ್ರಿ ಅವರು ಮಣಿಪಾಲ ರೋಟರಿ ಕ್ಲಬ್ಬನ್ನುದ್ದೇಶಿಸಿ ಮಾತನಾಡುವಾಗ ತಿಳಿಸಿರುವರು.

ದ. ಕ. ಜಿಲ್ಲಾ ಶಾಲೆಗಳ ದುರುಸ್ತಿ

ದಕ್ಷಿಣ ಕನ್ನಡ ಸಹಿತ ರಾಜ್ಯದ 13 ಜಿಲ್ಲೆಗಳಲ್ಲಿ ತುಂಬಾ ನಾದುರುಸ್ತಿಯಲ್ಲಿರುವ ಶಾಲಾ ಕಟ್ಟಡಗಳನ್ನು ಕಾಮಗಾರಿ ಖಾತೆಯಲ್ಲಿರುವ ೬ ಲಕ್ಷ ರೂಪಾಯಿಗಳಿಂದ ಈ ವರ್ಷದಲ್ಲೇ ದುರುಸ್ತಿಗೊಳಿಸಲಾಗುವುದೆಂದು ಸಚಿವ ಶ್ರೀ| ಎಚ್. ಎಮ್. ಚೆನ್ನಬಸಪ್ಪ ಅವರು ವಿಧಾನಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿರುತ್ತಾರೆ.

ಮಂಗಳೂರಲ್ಲಿ ಕೊಲೇಜ್ ವಿದ್ಯಾರ್ಥಿಗಳ ಹೊಸ್ಟೆಲ್

ಮಂಗಳೂರಲ್ಲಿ ಕೊಲೇಜ್ ವಿದ್ಯಾರ್ಥಿಗಳಿಗಾಗಿ ಸುಮಾರು 7 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಯೋಜಿಸಲಾದ ಹೊಸ್ಟೆಲಿಗೆ ರಾಜ್ಯ ಸರಕಾರ ಅನುಮತಿ ನೀಡಿದೆಯೆಂದು ತಿಳಿಯಲಾಗಿದೆ.

ಭಾರತವರ್ಷ ಪಾಪಕೂಪವೆನಿಸಿದೆ. ಜಾತಿ ಮತ ಧರ್ಮಗಳ ಹೆಸರಿನಿಂದ ಅನುಸಿತ್ಯದ ಸಾಮಾಜಿಕ ರಾಜಕೀಯಾದಿ ಜೀವನದ ರಂಗದಲ್ಲಿ ಪಾಪಾಚರಣೆಯನ್ನೇ ಮಾಡುತಿದ್ದು ಧರ್ಮಸಂಸ್ಥಾಪನೆಗಾಗಿ ದೇವರು ಆಗಾಗ ಜನ್ಮವೆತ್ತುತ್ತಿರುವನು.

ಯುದ್ಧೋಪಕರಣವನ್ನು ಬೆಳೆಸುವುದರಿಂದಲೂ ಅಣುಬಾಂಬು, ಹೈಡ್ರೋಜನ್ ಬಾಂಬು, ಸಂತಾನ ನಿಯಂತ್ರಣ, ಸಂಪತ್ತಿನ ಸಂಗ್ರಹಣೆ, ಇವುಗಳಿಂದಲೂ ಮಾನವಕುಟುಂಬಕ್ಕಾದ ದುಃಖದ ಕಾರ್ಮೋಡ ಹರಿಯದು. ಅದನ್ನು ಸರಿಯಿಸಿ ಶಾಂತಿಮಯ ಬಾಳುವೆಯನ್ನುಂಟುಮಾಡಲು ವಿಶ್ವದ ಜನತೆ ಭ್ರಾತೃತ್ವ ಸಮಾನತೆ ಅಹಿಂಸೆಗಳ ನಿಷ್ಠೆಗೊಂಡು ವಿಶ್ವಪ್ರೇಮದ ಕಲ್ಯಾಣ ಸಾಧನಾ ಧರ್ಮವನ್ನು ಅವಲಂಬಿಸಬೇಕು.

ಎಂ. ಸುಬ್ರಾಯನ್.

ಸ್ವೋದ್ಯೋಗ ಯೋಜನೆ ಪ್ರಯೋಜನ ಪಡೆದವರು

ಸ್ವೋದ್ಯೋಗ ಯೋಜನೆಗೆ ಸರಕಾರ ಹೆಚ್ಚಿನ ಪ್ರೋತ್ಸಾಹ ಕೊಡುತಿದ್ದು ಅದರಂತೆ ಜಿಲ್ಲೆಯಲ್ಲಿ ಈ ತನಕ ಸುಮಾರು 1 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೂಲಧನ ತೊಡಗಿಸಿ 237 ಮಂದಿ ಸ್ವೋದ್ಯೋಗ ಯೋಜನೆಯ ಪ್ರಯೋಜನ ಪಡೆದಿದ್ದಾರೆಂದು ದ. ಕ. ಜಿಲ್ಲೆಯ ಕೈಗಾರಿಕಾ ಇಲಾಖೆಯ ಉಪನಿರ್ದೇಶಕ ಶ್ರೀ| ವಿಠ್ಠಲ ಶೆಟ್ಟಿಯವರಿಂದ ತಿಳಿದುಬರುತ್ತದೆ.

ಬಂದರ ಸಲಹಾಸಮಿತಿಗೆ

ಕರ್ನಾಟಕ ರಾಜ್ಯ ಬಂದರ ಸಲಹಾ ಸಮಿತಿಯ ಓರ್ವ ಸದಸ್ಯರನ್ನಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ| ಮಹಮದ್ ಕಮಾಲರನ್ನು ಸರಕಾರ ನಾಮಕರಣಮಾಡಿದೆ.

'ನವನಿರ್ಮಾಣ ಸಮಿತಿ'

ಸರ್ವೋದಯ ಸಿದ್ಧಾಂತದ ತಳಹದಿಯಲ್ಲಿ 'ನವನಿರ್ಮಾಣ ಸಮಿತಿ'ಯೊಂದನ್ನು ಪ್ರಾರಂಭಿಸಲು ಇತ್ತೀಚೆಗೆ ಮಂಗಳೂರಲ್ಲಿ ಸಮಾವೇಶಗೊಂಡ ಜಿಲ್ಲೆಯ ವಿವಿಧೆಡೆಗಳಿಂದ ಆಗಮಿಸಿದ ಯುವಜನ ಪ್ರತಿನಿಧಿಗಳು ನಿರ್ಧರಿಸಿದ್ದಾರೆ.


ಮಂಗಳೂರಲ್ಲಿ 60 ಬೆಡ್ ಆಸ್ಪತ್ರೆ

ಮಂಗಳೂರಲ್ಲಿ ರೂ. 33 ಲಕ್ಷ ವೆಚ್ಚದಲ್ಲಿ 60 ಹಾಸಿಗೆಗಳ ಆಸ್ಪತ್ರೆಯೊಂದನ್ನು ಕಟ್ಟಿಸಲು 'ನೌಕರರ ರಾಜ್ಯ ವಿಮಾ ಕೊರ್ಪೊರೇಶನ್' (ಇ. ಎಸ್. ಐ.) ಮಂಜೂರಾತಿಗಾಗಿ ಅಂದಾಜು ಹಾಗು ಅಂತಿಮ ಯೋಜನೆ ಕಳುಹಿಸಲಾಗಿದೆಯೆಂದು ಕರ್ನಾಟಕ ಕಾರ್ಮಿಕ ಹಾಗು ಪ್ರವಾಸೋದ್ಯಮ ಸಚಿವರಿಂದ ತಿಳಿದುಬರುತ್ತದೆ.

—o—

ಸ್ವಯತ್ನದಿಂದ ಸಂಸ್ಥೆಯನ್ನು ಕಟ್ಟಿ, ಸನ್ನಡತೆ, ಸ್ವಯಂಸೇವೆಯಿಂದ ಸ್ಥಾನಮಾನ ಗಳಿಸಿ ಸಾರ್ಥಕ ಜೀವನ ನಡೆಸಿದ

ದಿ| ಯು. ಆರ್. ಪೈಗಳವರು



ಜಿಲ್ಲೆಯ ವಾಣಿಜ್ಯ ಕ್ಷೇತ್ರದಲ್ಲಿ ಕಳೆದ ನಾಲ್ಕು ದಶಕಗಳಿಂದ ಅಸಾಧಾರಣ ಪ್ರಭಾವ ಬೀರಿದ, ಸ್ವಯತ್ನ—ಸತತಯತ್ನ — ಸನ್ನಡತೆಗಳಿಂದ ಬಹಳವಾದುದನ್ನು ಸಾಧಿಸಬಹುದು ಎಂದು ಸ್ವತಹ ಆಚರಣೆಯಿಂದ ತೋರಿದವರಲ್ಲೊಬ್ಬರಾದ, ಮಂಗಳೂರಿನ ರಥಬೀದಿಯ "ಶ್ರೀನಿವಾಸ ಬ್ರದರ್ಸ್" ಸಂಸ್ಥೆಯ ಸ್ಥಾಪಕ ಶ್ರೀ ಯು.ಆರ್.ಪೈಗಳವರು, ತಾ.1-9-74ನೇ ರವಿವಾರ ನಡುರಾತ್ರಿ ಹೃದಯಾಘಾತದಿಂದ ನಿಧನಹೊಂದಿದರು. ಮರಣಕಾಲದಲ್ಲಿ ಅವರ ವಯಸ್ಸು 71.

ಉಡುಪಿಯವರಾದ ಶ್ರೀ ಯು. ಆರ್. ಪೈಗಳವರು ಶ್ರೀಮಂತಿಕೆಯಲ್ಲಿ ಬೆಳೆದವರಾಗಿರದೆ, ಕುಲೀನ ಗೌ| ಸಾರಸ್ವತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಸಾಮಾನ್ಯ ಜೀವಿ; ಆದರೆ, ಅವರಲ್ಲಿ ಅಸಾಮಾನ್ಯ ಕರ್ತತ್ವಶಕ್ತಿಯ ಶ್ರೀಮಂತಿಕೆ ತುಂಬಿತ್ತು. ಸುಮಾರು 1926ರಲ್ಲಿ ತಮ್ಮ 23ನೇ ವಯಸ್ಸಿನಲ್ಲಿ, ಅವರು ಕೊಟ್ಟಿಕಾರ್ ಬ್ರದರ್ಸ್ (ಬೊಂಬೇ ಲೈಫ್ ಇಸ್ಯೂರೆನ್ಸ್ ಕಂಪೆನಿಯ ಮದರಾಸು ಪ್ರಾಂತ್ಯ ಹಾಗೂ ಮೈಸೂರು ಸಂಸ್ಥಾನದ ಮುಖ್ಯ ಏಜಂಟರು) ಸಂಸ್ಥೆಯಲ್ಲಿ ಸಾಮಾನ್ಯ ಕಾರಕೂನರಾಗಿ, ಮಂಗಳೂರಿನ ಆ ಸಂಸ್ಥೆಯ (ರಥಬೀದಿಯಲ್ಲಿದ್ದ) ಶಾಖೆಗೆ ಪ್ರಥಮತಃ ಪ್ರವೇಶಮಾಡಿದರು. ಅಲ್ಲಿ ಟೈಪ್‌ರೈಟರುಗಳು, ಛಾಪಖಾನೆಗಳಿಗೂ ಪುಸ್ತಕ ಬೈಂಡಿಂಗ್ ಮಾಡುವವರಿಗೂ ಅವಶ್ಯವಿರುವ ಕೆಲಿಕೋ ಮತ್ತು ಕೆಲವೊಂದು ತರಗತಿಯ ಕಾಗದಗಳನ್ನು ತರಿಸಿ ಒದಗಿಸುವ ಉಪಕಸುಬನ್ನು 1928ರ ಸುಮಾರಿಗೆ ಆರಂಭಿಸಿದರು. ಈ ವ್ಯಾಪಾರವು ಜಿಲ್ಲೆಯಾದ್ಯಂತ ಹರಡಿ, ಶ್ರೀ ಪೈಯವರು "ಶ್ರೀನಿವಾಸ ಬ್ರದರ್ಸ್" ಹೆಸರಿನಲ್ಲಿ ತಮ್ಮ ವ್ಯಾಪಾರವನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಲು ಅವರಿಗೆ ಉತ್ತೇಜನ— ನೆರವುಗಳು ದೊರೆತುವು. ಸಂಸ್ಥೆಯು ಜನಪ್ರಿಯವಾಗುತ್ತ, ಅದರ ಚಟುವಟಿಕೆಗಳು ಜಿಲ್ಲೆಯ ಹೊರಗೂ ವ್ಯಾಪಿಸಿದುವು.

ಶ್ರೀ ಯು. ಆರ್. ಪೈಯವರು, ಈ ಶತಮಾನದ ಮೂರನೇ ದಶಕದಲ್ಲಿ ಮಂಗಳೂರಲ್ಲಿ ಆರಂಭಿಸಲ್ಪಟ್ಟ "ಬೇಂಕ್ ಒಫ್ ಮಂಗ್ಳೂರ್ ಲಿಮಿಟೆಡ್—ಸಂಸ್ಥೆಯ ಡೈರೆಕ್ಟರರಾಗಿಯೂ ಸಿಟಿಪ್ರೆಸ್ಸಿನ ಡೈರೆಕ್ಟರರಾಗಿಯೂ ಸೇರಿ ಹಲವು ವರ್ಷ ಸೇವೆ ಸಲಿಸಿದರು.

ಅವರು ಜಿಲ್ಲೆಯ ನೂರಾರು ಸ್ಟೇಷನರಿ ವ್ಯಾಪಾರಿಗಳಿಗೂ ಛಾಪಖಾನೆಗಳಿಗೂ ಕೇವಲ ಕಾಗದ—ಪುಸ್ತಕ—ಲೇಖನ ಸಾಮಾಗ್ರಿಗಳು ಮತ್ತು ಮುದ್ರಣ ವಸ್ತುಗಳನ್ನೊದಗಿಸುವ ವ್ಯಾಪಾರಿಗಳಾಗಿರದೆ, ಅಂಥ ವ್ಯಾಪಾರಕ್ಕೆ ಪ್ರೋತ್ಸಾಹಕರೂ ಸಲಹೆಗಾರರೂ ಆಗಿ ನೆರವಾಗುತಿದ್ದರು.

ಅವರ ಚಿರಂಜೀವಿಗಳಾಗಿರುವ ಶ್ರೀ ಯು. ಮೋಹನ ಪೈ ಮತ್ತು ಶ್ರೀ ಯು. ರಮೇಶ ಪೈಗಳವರು ತಕ್ಕಷ್ಟು ಶಿಕ್ಷಣ ಪಡೆದು ಈ ಉದ್ಯಮವನ್ನು ಸೇರಿ, ಸಂಸ್ಥೆಯ ವ್ಯಾಪಾರ ಕ್ಷೇತ್ರವನ್ನು ಮತ್ತಷ್ಟು ವಿಸ್ತರಿಸಿದರು. ಬೆಂಗಳೂರಲ್ಲಿಯೂ ಈ ಸಂಸ್ಥೆಯ ಸಹೋದರ ಸಂಸ್ಥೆಯೊಂದು ತಲೆಯೆತ್ತಿ ಬೆಳೆದು ದೃಢವಾಯಿತು.

ಶ್ರೀ ಯು. ಆರ್. ಪೈಗಳವರು, ನಾಲ್ಕೈದು ದಶಕಗಳ ಹಿಂದೆ ವ್ಯಾಪಾರೀ ಕ್ಷೇತ್ರವನ್ನು ಪ್ರವೇಶಿಸಿದಾಗ ಎಂಥ ಸರಳತೆ ಶ್ರಮಗಳನ್ನು ತೋರುತಿದ್ದರೋ ಅದನ್ನೇ ತಮ್ಮ ಕೊನೆಯ ದಿನದ ವರೆಗೆ ಪಾಲಿಸಿದರು. ಕೇವಲ ಶೂನ್ಯದಿಂದೆಂಬಂತೆ ಆರಂಭಿಸಿ, ವಟವೃಕ್ಷದ ಬೀಜ ಮೊಳೆತು ಹೆಮ್ಮರನಾಗುವಂತೆ—ಸಂಸ್ಥೆಯನ್ನು ಬೃಹದಾಕಾರಕ್ಕೆ ಬೆಳೆಸುವಂತೆ ಸಾಧಿಸಿ ಸಫಲರಾದರು. ಸ್ವೋದ್ಯೋಗ, ಸ್ವಯತ್ನದ ಯಶಸ್ಸನ್ನು ಪ್ರತ್ಯಕ್ಷೀಕರಿಸಿದ ನಮ್ಮ ಜಿಲ್ಲೆಯ ಸಾಹಸಿಗಳಲ್ಲಿ ಶ್ರೀ ಯು. ಆರ್. ಪೈಗಳವರು ಒಬ್ಬರು.

ಅವರು ಧರ್ಮಪತ್ನಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿ ಮತ್ತು ಅಸಂಖ್ಯಾತ ಸ್ನೇಹಿತರನ್ನೂ ಅಭಿಮಾನಿಗಳನ್ನೂ ಅಗಲಿರುವರು. ಇಬ್ಬರು ಪುತ್ರರೂ ತಮ್ಮ ಪಿತನ ಹೆಜ್ಜೆಯಲ್ಲೇ ಮುಂದುವರಿದು ಸಂಸ್ಥೆಯನ್ನು ಸರ್ವಜನಪ್ರಿಯವನ್ನಾಗಿ ಮಾಡುವ ಸಮರ್ಥರಿದ್ದಾರೆ.

ನಾಲ್ಕು ದಶಕಗಳಿಗೂ ಮಿಕ್ಕಿ ಮಂಗಳೂರು ನಗರದ ತಥಾ ಜಿಲ್ಲೆಯಲ್ಲಿ ಅಸಾಧಾರಣ ಪ್ರಭಾವ ಬೀರಿದ ಅಸಾಮಾನ್ಯರೊಬ್ಬರನ್ನು ನಾವು ಕಳೆದುಕೊಂಡಿರುವೆವು.

—

ಆಹಾರಬೆಳೆಗಳನ್ನು ಬಾಧಿಸುತ್ತಿರುವ ಪ್ರಾಚೀನ ಪಿಡುಗಿನ ನಿವಾರಣೆಗೆ ಮೈಸೂರಿನಲ್ಲಿ ಸಂಶೋಧನೆ

(ಎಂ. ಎಸ್. ಕೆ. ಭಟ್)

"ಡೌನಿ ಮಿಲ್‌ಡ್ಯೂ" ಇದೊಂದು ಹೊಸ ಯಂತ್ರೋಪಕರಣದ ಹೆಸರೇ ಅಥವಾ ಒಂದು ಕಟ್ಟಡವೇ? ಎರಡೂ ಅಲ್ಲ. ಇದು ಹಲವು ಸಸ್ಯಗಳನ್ನು ಬಾಧಿಸುತ್ತಿರುವ ಒಂದು ಪ್ರಾಚೀನ ವ್ಯಾಧಿ.

ಈ ವ್ಯಾಧಿಗಳು ಗಿಡಗಳ ಮೇಲೆ ದಾಳಿ ಮಾಡಿದಾಗ ಕುಡಿಗಳು ಕಂದುಬಣ್ಣಕ್ಕೆ ತಿರುಗಿ ಸೊರಗುತ್ತವೆ. ಧಾನ್ಯಗಳು ಕ್ಷಯಿಸಲಾರಂಭಿಸುತ್ತವೆ. ಏಷ್ಯ, ಅಫ್ರಿಕ, ಯುರೋಪ್ ಮತ್ತು ಅಮೆರಿಕದ ಹಲವು ದೇಶಗಳಲ್ಲಿ ಸಜ್ಜೆ, ಸೋರ್ಘಂ ಮತ್ತು ಮೆಕ್ಕೆಜೋಳದ ಬೆಳೆಗಳನ್ನು ನಾಶಪಡಿಸುತ್ತಿರುವ ಅತ್ಯುಗ್ರ ವ್ಯಾಧಿ ಇದು.

ಭಾರತದಲ್ಲಿ ಸುಮಾರು 23 ದಶಲಕ್ಷ ಎಕರೆಗಳಷ್ಟು ಜಮೀನುಗಳಲ್ಲಿ ಸಜ್ಜೆಯನ್ನು ಬೆಳೆಯಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಭಾರತದಲ್ಲಿ ಶೇಕಡ 20ರಿಂದ 60ರಷ್ಟು ಸಜ್ಜೆ ಬೆಳೆ ಈ ವ್ಯಾಧಿಯಿಂದ ನಾಶವಾಯಿತು. ಆದರೆ ಮೈಸೂರಿನಲ್ಲಿ ಸಸ್ಯರೋಗ ಶಾಸ್ತ್ರಜ್ಞರ ಒಂದು ತಂಡದ ನಿಷ್ಠಾವಂತ ಪ್ರಯತ್ನಗಳ ಫಲವಾಗಿ ಇಂಥ ವಿನಾಶ ಮತ್ತೆ ಪುನರಾವರ್ತನೆಯಾಗಲಾರದು.

ಡೌನಿ ಮಿಲ್‌ಡ್ಯೂ ವ್ಯಾಧಿಯನ್ನು ನಿಯಂತ್ರಿಸುವ ಪ್ರಯತ್ನ ಮೈಸೂರಿನಲ್ಲಿ 1969ರಲ್ಲಿ ಆರಂಭವಾಯಿತು. ಮೈಸೂರು ವಿಶ್ವವಿದ್ಯಾನಿಲಯ ಮತ್ತು ಅಮೆರಿಕದ ಕೃಷಿ ಸಂಶೋಧನ ಸಂಸ್ಥೆ ಈ ಜಂಟಿ ಸಂಶೋಧನ ಪ್ರಾಜೆಕ್ಟನ್ನು ವ್ಯವಸ್ಥೆಗೊಳಿಸಿದವು. ಈ ಯೋಜನೆ ಸುಮಾರು 4 ಲಕ್ಷ ರೂ.ಗಳ ಪಿಎಲ್-480ರ ಗ್ರಾಂಟನ್ನು ಪಡೆಯಿತು.

ಪ್ರಾಜೆಕ್ಟಿನ ಮುಖಂಡರಾದ ಡಾ| ಕುಣಿಗಲ್ ಎಂ. ಸಫಿಯುಲ್ಲಾ ಅವರು ಕಳೆದ 20 ವರ್ಷಗಳಿಂದ ಈ ವ್ಯಾಧಿಯ ನಿಯಂತ್ರಣದಲ್ಲಿ ಆಸಕ್ತರಾಗಿದ್ದಾರೆ.

—

ಆಸ್ಪತ್ರೆಯಲ್ಲಿ ಸಚಿತ್ರ ಫೋನ್‌ಗಳು

ಖಾಸಗಿ ಮನೆಗಳಿಗೆ ಸಚಿತ್ರ ಫೋನ್‌ಗಳು ಬರುವ ದಿನ ಬಹಳ ದೂರ ಇರಬಹುದು, ಆದರೆ ಚಿಕಾಗೋ ಆಸ್ಪತ್ರೆಗಳಲ್ಲಿ ಸಚಿತ್ರ ಫೋನುಗಳು ಬಳಕೆಯಲ್ಲಿವೆ. ಅವು ವೈದ್ಯರಿಗೆ ಬಹಳ ಸಹಾಯಕವಾಗಿವೆ. ರೋಗಿಗಳ ಎಕ್ಸ್–ರೇ ಚಿತ್ರಗಳನ್ನು ಸಚಿತ್ರ ಫೋನ್ ವ್ಯವಸ್ಥೆಯ ಮೂಲಕ ಪ್ರೇಷಿಸಲಾಗುವುದು. ಇದರಿಂದ ಅನೇಕ ವೈದ್ಯರುಗಳಿಗೆ ಏಕಕಾಲದಲ್ಲಿ ತಂತಮ್ಮ ಕಚೇರಿಗಳಲ್ಲಿ ಪರೀಕ್ಷೆ ನಡೆಸಲು ಸಾಧ್ಯವಾಗುವುದು. ಫಲದೆಗಳನ್ನು ಕೈಯಿಂದ ಸರಿಪಡಿಸುವ ಸಾಧ್ಯತೆಯು ವೈದ್ಯರುಗಳಿಗೆ ಬಹಳ ಸಂತೋಷಕರವಾಗಿದೆ, ಏಕೆಂದರೆ ಎಕ್ಸ್–ರೇಯ ಗುಣಮಟ್ಟ ಚೆನ್ನಾಗಿಲ್ಲದಿದ್ದರೆ ಹೆಚ್ಚು ಅಥವಾ ಕಡಮೆ ಬೆಳಕು ಹಾಯಿಸಬಹುದು.

ಸಚಿತ್ರ ಫೋನು, ದೂರದ ನಗರದಲ್ಲಿರುವ ವೈದ್ಯನಿಗೆ, ಫೋನ್ ಮೂಲಕ ಇತರ ತಜ್ಞ ವೈದ್ಯರನ್ನು ಸಂಪರ್ಕಿಸಿ ರೋಗಿಯ ಸಮಸ್ಯೆಗಳನ್ನು ವಿಶ್ಲೇಷಿಸಲು ಸಹಾಯಕವಾಗಬಲ್ಲದು ಎಂದು ವೈದ್ಯರು ಹಾರೈಸುತ್ತಿದ್ದಾರೆ.

—

ಮೊಣಕಾಲಿನ ವ್ಯಾಧಿಗಳು

ಮನುಷ್ಯನ ಮಂಡಿ ಸಾಮಾನ್ಯವಾಗಿ ತನಗಿರುವ ತೊಂದರೆಯೇನೆಂದು ಹೇಳುವುದಿಲ್ಲ. ಆದರೆ ಮಂಡಿಯ ಸಂದಿನ ಧ್ವನಿಗಳನ್ನು ಆ ಅವಯವದ ಸಮಸ್ಯೆಗಳನ್ನು ಗುರುತಿಸಲು ಬಳಸಬಹುದು ಎಂದು ಓಹಿಯೋ ರಾಜ್ಯದ ಆಕ್ರನ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ನಿರ್ದಿಷ್ಟ ರೋಗಗಳಿರುವ ಮಂಡಿಗಳು ಹೊರಡಿಸುವ ಧ್ವನಿಗಳನ್ನು ವಿದ್ಯುತ್ ಸಂಕೇತಗಳಿಗೆ ಪರಿವರ್ತಿಸಲು ಡಾ| ಮಾಮೆಟೋರ್ ಜೋ ಮತ್ತು ಅವರ ಸಹೋದ್ಯೋಗಿಗಳು ಪ್ರಯತ್ನಿಸುತಿದ್ದಾರೆ. ಈ ಸಂಕೇತಗಳನ್ನು ಮ್ಯಾಗ್ನೆಟಿಕ್ ಟೇಪ್‌ಗಳಲ್ಲಿ ದಾಖಲುಮಾಡಿ, ಆರೋಗ್ಯಕರ ಮಂಡಿಗಳಿಂದ ದೊರೆಯುವ ಸಂಕೇತಗಳೊಡನೆ ಹೋಲಿಸಬಹುದು. ವಿಭಿನ್ನ ಸ್ವರೂಪಗಳು ನಿರ್ದಿಷ್ಟ ಮಂಡಿ ಸಮಸ್ಯೆಗಳ ಸ್ವರೂಪಗಳನ್ನು ತಿಳಿಸುತ್ತವೆಂದು ಅವರು ಅಭಿಪ್ರಾಯಪಡುತ್ತಾರೆ. ಅವರ ಅಧ್ಯಯನಕ್ಕೆ ನ್ಯಾಷನಲ್ ಇನ್ಸ್ಟಿಟ್ಯೂಟ್ಸ್ ಆಫ್ ಹೆಲ್ತಿನ ನೆರವೂ ದೊರೆತಿದೆ.

—



ಈ ವಾರದ ಭವಿಷ್ಯ

(ಎಮ್. ಸುಬ್ರಾಯನ್)

ತಾ. 8-9-74ರಿಂದ 14-9-1974ರ ವರೆಗೆ

ಮೇಷ:

ನಿಮಗೆ ತೃತೀಯದ ಶನಿ ಕೌಟುಂಬಿಕ ವಾತಾವರಣದಲ್ಲಿ ಅಶಾಂತಿಯನ್ನು ಬೆಳೆಸುತ್ತಿರುವನು. ಹೀಗಿದ್ದರೂ ಅವುಗಳನ್ನು ಎದುರಿಸಿ ಮೇಲಕ್ಕೆ ಬರುವಿಕೆಯಾಗುತ್ತದೆ. ಗುರುರಾಯನ ಅನುಕೂಲ ಸ್ಥಿತಿಯು ಇದ್ದು, ಕಷ್ಟಕಾಲದಲ್ಲಿ ನಿಮಗೆ ದೇವರ ರಕ್ಷಣೆಯು ನೆಲೆಯು ಇರುತ್ತದೆ.

ವೃಷಭ:

ಕಲುಷಿತವಾದ ಮನೋವೃತ್ತಿಯನ್ನು ತಾಳಿ ಯಾವ ಕಾರ್ಯಗಳೂ ಶುಚಿತ್ವದಿಂದ ಕೂಡಿದವುಗಳಾಗಿರುವುದಿಲ್ಲ. ಇದರಿಂದ ಮನೋದ್ವೇಗವಾಗುತ್ತಿರುವುದು. ಆರ್ಥಿಕದ ಕಡೆಗೆ ದೃಷ್ಟಿಯನ್ನು ಹೊಂದಿ ನೆಲಸಿದವರಾಗುವಿರಿ. ಸತ್ಯನ್ಯಾಯವಾದಿಗಳೆಂಬ ನೆನಪಿರುತ್ತದೆ.

ಮಿಥುನ:

ಭಿನ್ನ ಭಿನ್ನ ವಿಚಾರಸಮಸ್ಯೆಗಳಿಂದ ಕೂಡಿದವರಾಗಿರುವಿರಿ. ಕೌಟುಂಬಿಕದಲ್ಲಿ ನವೀನತೆಯು ಕಂಡುಬರುವುದಾಗಿದೆ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದಿದವರಾಗಿ ಕಾಣುವಿರಿ; ರಿಕಾರ್ಡು ವ್ಯವಹಾರಗಳು ಮುಂದುವರಿಯುತ್ತವೆ. ವಾಸಸ್ಥಾನದ ಬದಲಾವಣೆಯ ಕಡೆಗೆ ಗಮನ ಕಂಡುಬರುವುದಾಗಿರುತ್ತದೆ. ಪ್ರವಾಸವಿದೆ.

ಕರ್ಕಾಟಕ:

ನೀವು ನಿಮ್ಮ ವ್ಯವಸಾಯದಲ್ಲಿ ಆರ್ಥಿಕದ ತೃಷೆ ಹೊಂದಿದವರಾಗಿ ನೆಲಸಿರುವಿರಿ. ಇದರಿಂದ ಅನ್ಯ ವಿಚಾರವನ್ನು ನೀವು ಹೊಂದದವರಾಗಿರುವಿರಿ. ಸಂಪತ್ತಿನ ನೆಲೆ ತನ್ನ ನೆಲೆ ಎಂಬ ವಿಚಾರವೇ ನಿಮ್ಮದು. ಇದರಿಂದ ಕೌಟುಂಬಿಕ ಹಾಗೂ ಅನ್ಯ ವ್ಯವಸಾಯದಲ್ಲಿ ಅನ್ಯರಿಗೆ ವಿರೋಧ ವರ್ತನೆಯನ್ನು ಮಾಡುತ್ತಾ ನೆಲಸುವ ಯೋಗವಿದೆ.

ಸಿಂಹ:

ನಿಮ್ಮನ್ನು ನಿಮ್ಮ ಶುಚಿರುಚಿಗಳ ಮನೋವೃತ್ತಿಯೇ ರಕ್ಷಿಸುತ್ತಿರುವುದು. ಮಾತ್ರವಲ್ಲದೆ ಧೈರ್ಯವನ್ನು ಕಷ್ಟದಲ್ಲಿಯೂ ತಾಳಿ ಅದನ್ನು ಎದುರಿಸಿ ನಿಲ್ಲುವವರಾಗುವಿರಿ. ಈ ಕಾರಣದಿಂದ ಅನ್ಯರಿಗೆ ನೀವು ಪ್ರತಿಷ್ಠಿತ ನೆಲೆಯಿಂದ ಕಂಡುಬರುವಿರಿ. ರಿಕಾರ್ಡು ವ್ಯವಹಾರಗಳು ಮುಂದುವರಿಯುತ್ತವೆ. ಪ್ರವಾಸಕ್ಕಿರುವ ಘಟನೆ ಇದೆ.

ಕನ್ಯಾ:

ಜೀವನದಲ್ಲಿ ನಿಮ್ಮ ವಾತಾವರಣವು ಚೆನ್ನಾಗಿರುವುದಿಲ್ಲ. ಇದರಿಂದ ಹಲವಾರು ಮುಗ್ಗಟ್ಟುಗಳನ್ನೂ ಮಾನಸಿಕ ಅಶಾಂತಿಯನ್ನೂ ಹೊಂದಿರುವಿರಿ. ನೌಕರರು ಸ್ಥಾನಾಂತರಕ್ಕಾಗಿ ಯತ್ನಿಸುವರು. ಪ್ರವಾಸಕ್ಕಿರುವ ಸಂಘಟನೆಯು ಇರುತ್ತದೆ. ವಿದ್ಯಾಜೀವನದವರು ಪ್ರಗತಿಯಿಂದ ಕೂಡಿದವರಾಗಿ ಕಾಣಬರುವರು.

ತುಲಾ:

ಜೀವನದಲ್ಲಿ ಬದಲಾವಣೆಗಿರುವ ಸಂಪರ್ಕ ಇರುತ್ತದೆ. ದೂರಗತ ಬಂಧುಜನರ ಭೇಟಿಯನ್ನು ಹೊಂದಿದವರಾಗುವಿರಿ. ಪತ್ರವ್ಯವಹಾರಗಳು ಹೆಚ್ಚಿರುತ್ತವೆ. ವ್ಯಾಪಾರಿಗಳಿಗೆ ಈ ವಾರ ಪ್ರಗತಿಕರವಾಗಿ ಕಂಡುಬರುವುದು. ವಿದ್ಯಾರ್ಥಿಗಳು ಅಭಿವೃದ್ಧಿಯಿಂದ ಕೂಡಿದವರಾಗಿ ಕಾಣುತ್ತಿರುವರು.

ವೃಶ್ಚಿಕ:

ಹಲವಾರು ಕಠಿಣ ಸಮಸ್ಯೆಗಳನ್ನು ಎದುರಿಸಿ ಮೇಲಕ್ಕೆ ಬರುವಿರಿ. ನಿಮ್ಮ ಅದೃಷ್ಟಯೋಗವು ಗುರುರಾಯನಿಂದ ಚೆನ್ನಾಗಿಯೇ ಇದ್ದು ದೇವರ ರಕ್ಷಣೆಯು ಎಲ್ಲವುಗಳಲ್ಲಿಯೂ ಇರುತ್ತದೆ. ವಾಸಸ್ಥಾನದ ಬದಲಾವಣೆಯ ಕಡೆಗೆ ಆಸಕ್ತಿಯು ಕಂಡುಬರುವುದು. ನೌಕರರಿಗೆ ಸ್ಥಾನಾಂತರಕ್ಕಿರುವ ಸಂಪರ್ಕ ಕಂಡುಬರಲಿರುತ್ತದೆ.

ಧನು:

ಕೆಲಸಗಳು ಅಪೂರ್ಣಗಳಾಗಿಯೇ ಕಂಡುಬರುವವು. ಬಂಧುಜನರ ವಿಯೋಗಾವಕಾಶವಿರುತ್ತದೆ. ಕೋರ್ಟು ವ್ಯವಹಾರಗಳ ಕಡೆಗೆ ಗಮನ ಹರಿದಿರುವುದು. ಸತ್ಯನ್ಯಾಯಗಳಿಂದ ದೂರವಾದ ಘಟನೆಯನ್ನು ತಮ್ಮ ಉದ್ದೇಶಸಾಧನೆಯಲ್ಲಿ ಇರಿಸಿ ಹೋರಾಡುವಿಕೆ ನಡೆಯುತ್ತಿರುವುದು. ಪ್ರವಾಸಾಸಕ್ತಿಯು ಕಂಡುಬರಲಿರುತ್ತದೆ.

ಮಕರ:

ಹೊಸ ವ್ಯವಸಾಯದಿಂದ ಕೂಡಿರುವಿರಿ. ಆಕಸ್ಮಿಕ ಘಟನೆಗಳು ತೋರಿಬರುವವು. ಶುಭಕೆಲಸದ ಕಡೆಗೆ ಗಮನಯುಕ್ತರಾಗಿರುವಿರಿ. ವ್ಯಾಪಾರಿಗಳಿಗೆ ಈ ವಾರ ಪ್ರಗತಿದಾಯಕವಾಗಿ ಕಾಣಬರುವುದು. ನೌಕರರು ಸ್ಥಾನಾಂತರವನ್ನು ಹೊಂದಲಿರುವ ಅವಕಾಶ ಕಂಡುಬರುವುದಾಗಿದೆ. ದೇಹಾರೋಗ್ಯ ಚೆನ್ನಾಗಿರುವುದಿಲ್ಲ.

ಕುಂಭ:

ಹೊಸ ವಿಚಾರಗಳಿಂದ ಕೂಡಿರುವಿರಿ. ಆಕಸ್ಮಿಕ ಘಟನೆಗಳು ಕಂಡುಬರುವವು. ರಿಕಾರ್ಡು ವ್ಯವಸಾಯದಲ್ಲಿ ಆಸಕ್ತಿಯನ್ನು ಹೊಂದಿದವರಾಗಿರುವಿರಿ. ದೂರಗತ ಬಂಧುಜನರ ಭೇಟಿಯಾಗಲಿರುತ್ತದೆ. ರಿಕಾರ್ಡು ವ್ಯವಹಾರಗಳಲ್ಲಿ ಜಯವನ್ನು ಹೊಂದಿಬರುವಿರಿ. ನೌಕರರಿಗೆ ಸ್ಥಾನಾಂತರ ಪ್ರಗತಿಗಳು ಕಾಣುವವು.

ಮೀನ:

ಕಷ್ಟಗಳನ್ನು ಎದುರಿಸಿ ಮೇಲಕ್ಕೆ ಬರುವಿಕೆಯಾಗುತ್ತದೆ. ದೇಹಾರೋಗ್ಯದ ನೆಲೆ ಚೆನ್ನಾಗಿರುವುದಿಲ್ಲ. ರಿಕಾರ್ಡು ವ್ಯವಹಾರಗಳಿರುತ್ತವೆ. ಪ್ರವಾಸಾಸಕ್ತಿಯನ್ನು ಹೊಂದಿದವರಾಗಿ ತೋರುವಿರಿ. ವಿದ್ಯಾಜೀವನದವರಿಗೆ ಈ ವಾರ ಶುಭಕರ. ದೂರಗತ ಬಂಧುಜನರ ಭೇಟಿ ಸುಖಸಹಾಯಸಂಪರ್ಕಗಳುಂಟಾಗಲಿವೆ. ವಾಸಸ್ಥಾನದ ಬದಲಾವಣೆಗೆ ಆಸ್ಪದವು ಕಂಡುಬರುವುದು.

— —

ಭಾರತೀಯ ರೈಲ್ವೆಗಳ ಪ್ರಗತಿ

(ಲೇಖಕರು: ಶ್ರೀ ಎಲ್. ಎನ್. ಮಿಶ್ರಾ, ಕೇಂದ್ರ ರೈಲ್ವೆ ಸಚಿವರು)

ಭಾರತೀಯ ರೈಲ್ವೆಯು 5·5 ಲಕ್ಷ ಟನ್ ಸರಕನ್ನು ದಿನಂಪ್ರತಿ ಸಾಗಿಸುತ್ತಿದೆ. ಬೃಹತ್ ವಿದ್ಯುದ್‌ಗಾರಗಳು, ಉದ್ಯಮಗಳು, ಕೃಷಿ ಹಾಗೂ ವಿದೇಶೀ ವಾಣಿಜ್ಯ ರಂಗ, ನಗರ ಹಾಗೂ ಹಳ್ಳಿಗಳಲ್ಲಿರುವ ಶ್ರೀಸಾಮಾನ್ಯರ –ಹೀಗೆ ಎಲ್ಲರಿಗೂ ರೈಲ್ವೆಯು ಅತ್ಯಗತ್ಯವಾಗಿದೆ.

ಕಳೆದ ಎರಡು ದಶಕಗಳಲ್ಲಿ ರೈಲ್ವೆಯ ಸರಕುಸಾಗಾಣಿಕೆಯಲ್ಲಿ ಶೇಕಡ 180 ರಷ್ಟು ಮತ್ತು ಪ್ರಯಾಣಿಕರ ಸಂಚಾರದಲ್ಲಿ ಶೇಕಡ 110ರಷ್ಟು ಏರಿಕೆಯಾಗಿದೆ. ಸರಕುಸಾಗಾಣಿಕೆ ಪ್ರಮಾಣ 1951–52ರಲ್ಲಿ 9·8 ಕೋಟಿ ಟನ್‌ಗಳಿದ್ದುದು ಈಗ ಸುಮಾರು 20 ಕೋಟಿ ಟನ್‌ಗಳಿಗೇರಿದೆ.

ಐದನೇ ಯೋಜನೆಯಲ್ಲಿ ರೈಲ್ವೆ ಹಾಕಿಕೊಂಡಿರುವ ಗುರಿ ಗುರುತರವಾಗಿದೆ. ಮೂಲ ಹಾಗೂ ಭಾರಿ ಕೈಗಾರಿಕೆಗಳ ಅಗತ್ಯಗಳ ಪೂರೈಕೆ, ಕಲ್ಲಿದ್ದಲು, ಕಬ್ಬಿಣ ಅದುರು ಮುಂತಾದ ಖನಿಜಗಳ ಸಾಗಾಣಿಕೆ, ಸಿದ್ಧವಸ್ತುಗಳು ಮತ್ತು ಕೃಷಿ ಉತ್ಪನ್ನಗಳನ್ನು ಹೆಚ್ಚು ಸಾಗಿಸುವ ದಿಸೆಯಲ್ಲಿ ರೈಲ್ವೆ ಅಭಿವೃದ್ಧಿ ಸಾಧಿಸಬೇಕಾಗಿದೆ.

ದೆಹಲಿ, ಬೊಂಬಾಯಿ, ಕಲ್ಕತ್ತ ಮತ್ತು ಮದ್ರಾಸ್ ಈ ಮಹಾನಗರಗಳನ್ನು ಸಂಪರ್ಕಿಸುವ ಪ್ರಧಾನ ರೈಲುಮಾರ್ಗಗಳಲ್ಲಿ ರೈಲ್ವೆಯ ಮುಕ್ಕಾಲು ಭಾಗ ಪ್ರಯಾಣಿಕರ ಹಾಗೂ ಸರಕುಗಳ ಸಾಗಾಣಿಕೆಯಾಗುತ್ತಿದೆ.

ಐದನೇ ಯೋಜನೆಯಲ್ಲಿ ರೈಲ್ವೆಯು ಪ್ರಧಾನ ರೈಲುಮಾರ್ಗಗಳ ಸಾಮರ್ಥ್ಯ ಹೆಚ್ಚಿಸಲು ಹಾಗೂ ತಾಂತ್ರಿಕ ಸುಧಾರಣೆ ಸಾಧಿಸಲು ಪ್ರಯತ್ನಿಸಬೇಕಾಗಿದೆ. ರೈಲ್ವೆ ವ್ಯವಸ್ಥೆಯಲ್ಲಿ ನಾವೀನ್ಯತೆ ಸಾಧಿಸಿ, ಅಪಾರ ದಟ್ಟಣೆಯಿರುವ ರೈಲುಮಾರ್ಗಗಳ ಆಧುನೀಕರಣಕ್ಕೆ ಶ್ರಮಿಸಬೇಕಾಗಿದೆ. ರೈಲ್ವೆಯು ಪ್ರಯಾಣಿಕರ ಹಾಗೂ ಸರಕು ಸಾಗಾಣಿಕೆಯ ಅಧಿಕ ಒತ್ತಡವನ್ನು ಎದುರಿಸಲು ಸಜ್ಜಾಗುತ್ತಿತ್ತು; ಆದರೆ ಇಂಧನ ತೈಲ ಬಿಕ್ಕಟ್ಟು, ರೈಲ್ವೆಯ ಈ ಯೋಜನೆಯನ್ನು ರಾಹುಗ್ರಸ್ತಗೊಳಿಸಿದೆ.

ಐದನೇ ಯೋಜನೆಯಲ್ಲಿ ಇನ್ನೂ 1800 ಕಿಲೋಮೀಟರ್ ಮಾರ್ಗವನ್ನು ವಿದ್ಯುದೀಕರಣಗೊಳಿಸಲಾಗುತ್ತದೆ. ಇಂಧನ ಬಳಕೆಯನ್ನು ಕಡಿಮೆಮಾಡಲು ಪರಮಾವಧಿ ವೇಗದಲ್ಲಿ ರೈಲುಬಂಡಿಗಳನ್ನು ಓಡಿಸಲಾಗುತ್ತದೆ. ದೇಶೀಯ ತಾಂತ್ರಿಕಜ್ಞಾನದ ಬಳಕೆಯಿಂದ ಸ್ವಯಂಪೂರ್ಣತೆ ಸಾಧಿಸಲು ಶ್ರಮಿಸಲಾಗುತ್ತದೆ.

ಈಗ ರೈಲ್ವೆಯು ಐದನೇ ಯೋಜನೆಯ ಸವಾಲನ್ನು ಎದುರಿಸಲು ಸನ್ನದ್ಧವಾಗಬೇಕಾಗಿದೆ.

— —

"ಎಡಗಿವಿಯ" ಜನರು

ಮುಂದಿನ ಸಾರಿ ನಿಮ್ಮ ಪತ್ನಿ ನಿಮಗೆ ಕಿವಿ ಕೇಳಿಸಲಿಲ್ಲವೇ ಎಂದು ಮೂದಲಿಸಿದಾಗ ನೀವು "ಕ್ಷಮಿಸು, ನೀನು ನನ್ನ ಎಡಗಿವಿಯಲ್ಲಿ ಹೇಳಿದೆ ಅಂತ ಕಾಣುತ್ತದೆ" ಎನ್ನಬಹುದು.

ಎಡಗಿವಿ ಸಾಮಾನ್ಯವಾಗಿ ಬಲಗಿವಿಗಿಂತ ಬೇಗ ಶಬ್ದಗಳನ್ನು ಗ್ರಹಿಸುತ್ತದೆ ಎಂದು ಮಿಚಿಗನ್ ವಿಶ್ವವಿದ್ಯಾನಿಲಯದ ವಾಕ್‌ಶ್ರವಣ ವಿಜ್ಞಾನ ಪ್ರಯೋಗಾಲಯದ ಇಬ್ಬರು ವಿಜ್ಞಾನಿಗಳಾದ ಆಂಥೊನಿ ಜೆ. ಮುರಾಸ್ಕಿ ಮತ್ತು ಡೊನಾಲ್ಡ್ ಜೆ. ಶಾರ್ಫ್ ಕಂಡುಹಿಡಿದರು. ಆದರೆ, ನೀವು ಮಾತಿನ ಶಬ್ದಗಳನ್ನು ಆಲಿಸುವಾಗ ಬಲಕಿವಿಯದೇ ಮೇಲುಗೈ ಆಗಿರುತ್ತದೆ.


ಅವರ ಅಧ್ಯಯನದಲ್ಲಿ ಭಾಗವಹಿಸಿದ್ದವರಿಗೆ ಪ್ರತಿಸಾರಿ ಒಂದು ಪದ ಅಥವಾ ಅಕ್ಷರದ ಧ್ವನಿ ನೀಡಿದಾಗ ಅವರು ಮೊದಲು ಬಲಗಿವಿಯಿಂದ ಕೇಳಿದರು. ವಿವಿಧ ಬಗೆಯ ಹಾಗೂ ಎತ್ತರದ ಧ್ವನಿಗಳನ್ನು ಮಾಡಿದಾಗ ಎಡಗಿವಿ ಚೆನ್ನಾಗಿ ಕೇಳುತ್ತದೆ.

ಈ ಫಲಿತಾಂಶಗಳು, ಮಿದುಳಿನ ಎಡ ಪಾರ್ಶ್ವದ ಪ್ರಭಾವ ಪ್ರಧಾನವಾಗಿರುತ್ತದೆಂಬುದಕ್ಕೆ ಇನ್ನೊಂದು ಸಾಕ್ಷ್ಯ ಎಂದು ಡಾ| ಮುರಾಸ್ಕಿ ಮತ್ತು ಶಾರ್ಫ್ ಹೇಳುತ್ತಾರೆ. ಏಕಕಾಲದಲ್ಲಿ ಎರಡು ವಾಕ್ ಧ್ವನಿಗಳನ್ನು ಕೇಳುವ ಸಂದರ್ಭ ಬಂದಾಗ ಹೆಚ್ಚಿನವರು "ಬಲಗಿವಿಯವರು" ಎಂದು ಅವರು ಹೇಳುತ್ತಾರೆ.

— —

ಸತ್ಯಪಥದಲ್ಲೇ ನಡೆದ, ಯಾರಿಗೂ ಬಾಗದೆ ಶಿರವೆತ್ತಿಯೇ ನಡೆದ, ಯಾವ ಕಠಿನಕಾಲದಲ್ಲೂ ನೀತಿಪಥದಿಂದ ವಿಚಲಿತರಾಗದೆ ನೇರವಾಗಿಯೇ ನಡೆದ,

ಶ್ರೀ| ಎಲ್. ಎಸ್. ನಾಯ್ಕರವರು



ನಿಷ್ಠಾವಂತ ಕೊಂಗ್ರೆಸ್ ಕಾರ್ಯಕರ್ತರಲ್ಲೊಬ್ಬರೂ, ಉಡುಪಿಯ ಜನಜೀವನದಲ್ಲಿ ಹಲವು ವರ್ಷಗಳ ವರೆಗೆ ಪ್ರಭಾವಬೀರಿ, ಇತ್ತೀಚೆಗೆ ಕೆಲವರ್ಷಗಳಿಂದ ತನ್ನದೇ ಆದ ರೀತಿಯಲ್ಲಿ ಸೇವೆ ಸಲಿಸುತ್ತ, ಪ್ರಸಿದ್ಧಿಯನ್ನಿಚ್ಛಿಸದೆ ದುಡಿದವರೂ ಆದ ಶ್ರೀ| ಎಲ್. ಎಸ್. ನಾಯ್ಕರವರು, ತಾ. 30—8—74ನೇ ನಡುರಾತ್ರೆ, ಅಂಬಲಪಾಡಿಯಲ್ಲಿರುವ ತನ್ನ ಮನೆಯಲ್ಲಿ ಹೃದಯಸ್ತಂಭನದಿಂದ ದೈವಾಧೀನರಾದರೆಂಬು ತಿಳಿಸಲು ವಿಷಾದಿಸುವೆವು. ಮರಣಕಾಲದಲ್ಲಿ ಅವರಿಗೆ 68 ವರ್ಷ ತುಂಬಿತ್ತು.

ಶ್ರೀ| ಲಕ್ಷ್ಮಣ ಶ್ರೀನಿವಾಸ ನಾಯ್ಕರವರು ಬೇಂಕಿಂಗ್ ಕ್ಷೇತ್ರವನ್ನು ಪ್ರವೇಶಿಸಿ ಜೀವನವನ್ನಾರಂಭಿಸಿ, ಅನೇಕ ವರ್ಷಗಳ ವರೆಗೆ "ಉಡುಪಿ ಬೇಂಕ್ ಲಿಮಿಟೆಡ್"ನ ಮೆನೇಜಿಂಗ್ ಡೈರೆಕ್ಟರರಾಗಿದ್ದರು. ತಾರುಣ್ಯದಲ್ಲೇ ಕೊಂಗ್ರೆಸ್ಸನ್ನು ಸೇರಿ, ಗಾಂಧಿಜಿಯವರು ಬೋಧಿಸಿದ ತತ್ತ್ವಗಳ ಅಧ್ಯಯನ ಮಾಡಿದವರು. ಜಿಲ್ಲಾ ಕೊಂಗ್ರೆಸ್ ಕಮಿಟಿಯಲ್ಲಿ ಬಹುಕಾಲ ಸಕ್ರಿಯಾ ಸದಸ್ಯರಾಗಿದ್ದವರು. ಎ. ಐ. ಸಿ. ಸಿ. ಸದಸ್ಯರಾಗಿದ್ದವರು. ಅನೇಕ ವರ್ಷಗಳ ಹಿಂದೆ ಉಡುಪಿ ಮುನಿಸಿಪಲ್ ಕೌನ್ಸಿಲಿನ ಸದಸ್ಯರಾಗಿದ್ದರು.

ಕಳೆದ ಇಪ್ಪತ್ತು ವರ್ಷಗಳಿಂದ ಶ್ರೀ| ನಾಯ್ಕರು ಸಾಹಿತ್ಯದಲ್ಲೂ ವಿಶೇಷ ಆಸಕ್ತಿಹೊಂದಿ, ನೂರಾರು ಲೇಖನಗಳನ್ನು ಬರೆದಿದ್ದರು. ಉತ್ತಮ ತರಗತಿಯ ಇಂಗ್ಲಿಷ್ ಸಣ್ಣ ಕತೆಗಳನ್ನು ಆಯ್ದು ಕನ್ನಡಕ್ಕೆ ಅನುವಾದಿಸಿದ್ದರು. ಅವರ ಅನೇಕ ಕತೆಗಳು "ಪ್ರಭಾತ"ದಲ್ಲೂ, ಉಡುಪಿಯ "ರಾಯಭಾರಿ"ಯಲ್ಲೂ ಪ್ರಕಟವಾಗಿವೆ. ಮಂಗಳೂರಿನ "ಒಂದಾಣೆಮಾಲೆ"ಯಲ್ಲಿ ಅವರ 3-4 ಪುಸ್ತಕಗಳು ಪ್ರಕಟವಾಗಿವೆ. ("ಜೀವದ ಮೌಲ್ಯ" ಮತ್ತು ಇತರ ಕತೆಗಳು, ಇತ್ಯಾದಿ.) "ಪ್ರಭಾತ"ದ ಆರಂಭಕಾಲದಿಂದ ಅದರ ಹಿತಚಿಂತಕರಲ್ಲೊಬ್ಬರಾಗಿ, ನಿಕಟ ಸಂಬಂಧವನ್ನಿರಿಸಿಕೊಂಡಿದ್ದರು.

ಜೀವನದಲ್ಲಿ ಎಂಥ ಕಷ್ಟಕಾರ್ಪಣ್ಯಗಳ ಕಾಲದಲ್ಲೂ ಅವರು ಸತ್ಯಪಥದಿಂದ ಚಲಿಸಿದವರಲ್ಲ. ತಮ್ಮ ಜೀವಮಾನದಲ್ಲೆಂದೂ ಲಾಭಕ್ಕಾಗಿಯಾಗಲಿ ಲೋಭಕ್ಕಾಗಿಯಾಗಲೀ ಅಸತ್ಯ ವಚನವನ್ನಾಡಿದವರಲ್ಲ. ತನ್ನದೇ ಆದ ಸಮಸ್ಯೆಗಳೂ ಸಂಕಷ್ಟಗಳೂ ಹಲವಿದ್ದರೂ ಅವುಗಳನ್ನು ಯಾರ ಮುಂದೆಯೂ ತೋಡಿಕೊಳ್ಳದೆ ಮೌನವಾಗಿ ಸಹಿಸಿ, ಇತರರ ಸಮಸ್ಯೆಗಳನ್ನು ಕೇಳಿಕೊಂಡು ಅವರಿಗೆ ತನ್ನ ಶಕ್ತ್ಯಾನುಸಾರ ನೆರವಾಗುತಿದ್ದರು. ಅವರ ಹೃದಯ ವಿಶಾಲ; ಮನಸ್ಸು ನಿಷ್ಕಲಂಕ, ಜೀವನವು ಪವಿತ್ರ, ಸರಲವಾಗಿತ್ತು. ಠಾಕೂರರ "ಗೀತಾಂಜಲಿ"ಯಲ್ಲಿರುವಂತೆ "ದುರಹಂಕಾರದ ಬಲದ ಮುಂದೆ ಅವರೆಂದೂ ಮೊಣಕಾಲೂರಿ"ದವರಲ್ಲ. ಕೊನೆವರೆಗೂ ತಲೆಯೆತ್ತಿಯೇ, ಹೃದಯದ ಶ್ರೀಮಂತಿಕೆಯಿಂದಲೇ ನಡೆದವರು.

ಆಪ್ತರೆಲ್ಲರೂ ಅವರನ್ನು "ಲಕ್ಕಾ" ಎಂದು ಸಂಬೋಧಿಸುತಿದ್ದರು.

ನನ್ನ ಮತ್ತು ಶ್ರೀ| ಎಲ್. ಎಸ್. ನಾಯ್ಕರ ಮೈತ್ರಿಯು ನಾಲ್ಕು ದಶಕಗಳಿಗೂ ದೀರ್ಘಕಾಲದ್ದು. ಆ ಮೈತ್ರಿಯು ಪೂರ್ಣ; ಅಭೇದ್ಯವಾಗಿತ್ತು.

ನನ್ನ ಕೆಲವೇ ಉತ್ತಮೋತ್ತಮ ಮಿತ್ರರಲ್ಲಿ, ಆಪ್ತಬಂಧುಗಳಲ್ಲಿ ರತ್ನಪ್ರಾಯರಂತಿದ್ದವರೊಬ್ಬರನ್ನು ಕಳೆದುಕೊಂಡ ದುಃಖ ನನ್ನದು.

ಕುಡ್ವಿ ವಾಸುದೇವ ಶೆಣೈ.

ನೋಟೀಸು

ಮಂಗಳೂರು ಮುನ್ಸೀಫ್ ಕೋರ್ಟಿನಲ್ಲಿ

O. S. ನಂಬ್ರ 318/74.

ವಿ. ಆರ್. ಆನಂದಕೃಷ್ಣ ಮುದಲಿಯಾರ್ ಎಂಡ್ ಕಂಪೆನಿ ಮಂಗಳೂರು—ವಾದಿರು

ಮತ್ತು

ಕೆ. ವಿ. ಸದಾಶಿವ ರಾವ್ — ಪ್ರತಿವಾದಿ.

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿ ಕೆ. ವಿ. ಸದಾಶಿವ ರಾವ್, ವರ್ತದಾರ ಮತ್ತು ವ್ಯಾಪಾರಸ್ಥ, ಪುತ್ತೂರು ತಾಲೂಕು ಕರಿಕಲಪಂಜದಲ್ಲಿ ವಾಸ್ತವ್ಯ—ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ:—

ಮೇಲ್ಕಂಡ ವಾದಿರು, ನೀವು ಸದ್ರಿಯವರ ಅಂಗಡಿಯಲ್ಲಿ ನಡೆಸಿದ ಲೇವಾದೇವಿ ಬಾಬ್ತು ನಿಮ್ಮಿಂದ ಇನ್ನೂ ಬಾಕಿ ಬಹಾ ರೂ. 2700/- ವಗೈರೆಯನ್ನು ಬರಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವನ್ನು ತಾ. 3—10—74ಕ್ಕೆ ಮುಂದರಿಸಿಟ್ಟಿದೆ. ಸದ್ರಿ ದಾವೆಯ ವಿಷಯದಲ್ಲಿ ನಿಮಗೆ ಉದಹರಿಸುವುದಿದ್ದರೆ, ಆ ದಿನ ಹಗಲು ಗಂಟೆ 11ಕ್ಕೆ ನೀವು ಖುದ್ದಿನಿಂದಾಗಲೀ ವ ಕ್ರಮವಾಗಿ ಅಧಿಕಾರ ಹೊಂದಿದ ಪ್ಲೀಡರ್ ಮೂಲಕವಾಗಿಯಾಗಲೀ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿಯೇ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

ಮಂಗಳೂರು, 7-9-74.

D. Mohun Rau, ವಾದಿ ಕಡೆ ಎಡ್ವೊಕೇಟ್.

ನೋಟೀಸು

ಮಂಗಳೂರು ಸಿವಿಲ್ ಜಡ್ಜರ ಕೋರ್ಟಿನಲ್ಲಿ

Misc. ಅಪ್ಪೀಲು ನಂಬ್ರ 28/73.

ವಿ. ಎ. ಕೊಳ್ನಾಡು .... ಅಪ್ಪೆಲ್ಲಾಂಟ

ಮತ್ತು

ಸಾವಿತ್ರಿ ಆಚಾರ್ತಿ ... ರೆಸ್‌ಪೊಂಡೆಂಟ.

ಮೇಲ್ಕಂಡ ಅಪ್ಪೀಲಿನ ರೆಸ್‌ಪೊಂಡೆಂಟ್ ಸಾವಿತ್ರಿ ಆಚಾರ್ತಿರಿಗೆ, ಕಾರ್ಕಳ ತಾಲೂಕು ಕುಕ್ಕಾಜೆ ಗ್ರಾಮದ ದೊಂಡೆರಂಗಡಿಯಲ್ಲಿ, ತಮ್ಮಯ್ಯ ಆಚಾರಿಯ ಮಗಳು—ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮಂಗಳೂರು ಮುನ್ಸೀಫ್ ಕೋರ್ಟಿನ ಮಿಸಲೇನಿಯಸ್ ಕೇಸ್ 8/73ರ ಮೇಲಾದ ತಾ. 20—8—73ರ ಹುಕುಂನ ಮೇಲೆ ಅಪ್ಪೆಲ್ಲಾಂಟರು ದಾಖಲುಮಾಡಿದ ಮೇಲ್ಕಂಡ ಅಪ್ಪೀಲನ್ನು ರೆಸ್‌ಪೊಂಡೆಂಟರಾದ ನಿಮ್ಮ ಹಾಜರಾತಿ ಬಗ್ಗೆ ತಾ. 26-9-1974ಕ್ಕೆ ಮುಂದರಿಸಿಟ್ಟಿದೆ. ನಿಮಗೇನಾದರೂ ಉದಹರಿಸುವುದಿದ್ದರೆ ಆ ದಿನ ಹಗಲು ಗಂಟೆ 11ಕ್ಕೆ ನೀವು ಖುದ್ದಿನಿಂದಾಗಲೀ ವ ಕ್ರಮವಾಗಿ ಅಧಿಕಾರಹೊಂದಿದ ಪ್ಲೀಡರ್ ಮೂಲಕವಾಗಿಯಾಗಲೀ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿಯೇ ಸದ್ರಿ ಅಪ್ಪೀಲಿನ ತೀರ್ಮಾನವಾಗುವುದು. ತಿಳಿದಿರಲಿ.

ಮಂಗಳೂರು, 7—9—74.

D. Mohun Rau, ಅಪ್ಪೆಲ್ಲಾಂಟರ ಪರ ಎಡ್ವೊಕೇಟ್.

PRABHAT, KANNADA WEEKLY, MANGALORE-575001
REGD. No. KRNL-8.

To

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.